ಮಹಾವೀರ ಕಾಸರ, ಶಿವಮೊಗ್ಗ
ಹೆಂಡತಿ ಮತ್ತು ಪ್ರೇಯಸಿ ಒಂದೆಡೆ ಸೇರಿದಾಗ ಗಂಡನ ಪರಿಸ್ಥಿತಿ ಹೇಗಿರುತ್ತದೆ?



ಹುರಿದು ಮುಕ್ಕಲು ಸಿದ್ಧವಾಗುತ್ತಿರುವ ಬಾಂಡಲೆಯೊಳಗಿನ ಕಡಲೆಪುರಿಯಂತೆ.

ಎಂ.ಸಿ. ಧನ್ಯತಾ, ಬೆಂಗಳೂರು
ಲಕ್ಷ್ಮಣನ ಎಚ್ಚರಿಕೆಯನ್ನು ಸೀತೆಯು ಧಿಕ್ಕರಿಸಿದ್ದು ಏನನ್ನು ಸೂಚಿಸುತ್ತದೆ?
ವಾಲ್ಮೀಕಿಗೆ ಕಥೆಯನ್ನು ಹೇಗೆ ಮುಂದುವರಿಸಬೇಕೆಂದು ತಿಳಿದಿತ್ತು ಎನ್ನುವುದನ್ನು.

ಬಿ.ಸಿ. ರಾಯನ್, ಗೌರಿಬಿದನೂರು
ಇಲ್ಲೊಬ್ಬರು, ಮತ್ತೊಬ್ಬರಿಗೆ ಪರಿಚಯಿಸಿದಾಗ ಕೈಕುಲುಕುವುದರ ಬದಲು ಕಾಲಿಗೆ ಬಿದ್ದು ನಮಸ್ಕರಿಸುವರಲ್ಲ?
ಅದು ಅವರ ಕಾಲಿಗೆ ಕೆಸರು ಅಂಟಿದೆಯೋ ಅಥವಾ ಮರ್ಯಾದಸ್ಥರೋ ಎಂದು ತಿಳಿಯುವ ಕ್ರಮ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಕೆಟ್ಟ ಕನಸು ಬೀಳದಂತಿರಲು ಸುಲಭ ಉಪಾಯ?



ಎಚ್ಚರವಾಗಿರುವುದು!

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ನಾವು ಯಾವುದರೊಂದಿಗೆ ಒಪ್ಪಂದ ಮಾಡಿಕೊಂಡು ಬದುಕಬೇಕು?
ಅವಶ್ಯಕತೆಯೊಂದಿಗೆ,
ಅನಿವಾರ್ಯತೆಯೊಂದಿಗೆ.

ಅಮರಯ್ಯಾ ಪತ್ರಿಮಠ, ಸುರಪುರ
ಸಹೃದಯಿಯ ಲಕ್ಷಣಗಳಾವುವು?
ಇಸಿಜಿ ರಿಪೋರ್ಟ್ ಕರಾವಳಿಯ ಬೆಟ್ಟಸಾಲಿನಂತೆ ಮತ್ತೆ ಮತ್ತೆ ಕಾಣುವುದು.

ದಿನೇಶ್, ಗುಡ್ಡದೂರು
ರಾಜಕಾರಣಿಗಳು ಮತ್ತು ಚಲನಚಿತ್ರ ತಾರೆಯರು ರಾತ್ರಿಯಲ್ಲೂ ಕಪ್ಪು ಕನ್ನಡಕ ಧರಿಸಲು ಕಾರಣ?
ಕಣ್ಣುಗಳಲ್ಲಿ ನಿಜ ಭಾವನೆ ಕಂಡು ಬಿಟ್ಟೀತೆಂಬ ಮುನ್ನೆಚ್ಚರಿಕೆ.

ರಾಜೇಂದ್ರ ಹೆಗಡೆ, ಹಾವೇರಿ
ಗರ್ಭಗುಡಿಯಲ್ಲಿನ ದೇವರಿಗೂ, ಗರ್ಭದಲ್ಲಿರುವ ಮಗುವಿಗೂ ಏನು ವ್ಯತ್ಯಾಸ?
ಗರ್ಭದಲ್ಲಿರುವ ಮಗು ಚಲಿಸದಿದ್ದರೆ ಅದನ್ನು ಕೂಡಲೆ ಹೊರಗೆ ತೆಗೆಯುತ್ತಾರೆ.

ವಿ. ಮಾಧವ ಶ್ಯಾನುಭಾಗ, ಕುಂದಾಪುರ
ಮೃತ್ತಿಕಾಪಿಂಡ, ಶಿಲಾಖಂಡ, ಘೃತಭಾಂಡದಂತಹ ಮನಸ್ಥಿತಿಯ ಶಿಷ್ಯರಲ್ಲಿ ಯಾರು ಉತ್ತಮರು?
ಕರಗಿಸಿ ಮತ್ತೆ ಕಟ್ಟಬಹುದಾದ ಮೃತ್ತಿಕಾಪಿಂಡವೇ.

ರಾಜಶೇಖರ ಹಾದಿಮನಿ, ಧಾರವಾಡ
ಗಂಟು ಹಾಕುವವರಿಗೇ ಕಗ್ಗಂಟು ತಗುಲಿದರೆ ಏನು ಮಾಡುತ್ತಾರೆ?
ಸ್ಕ್ಯಾನ್ ಮಾಡಿ, ಮರ್ಮ ತಿಳಿದು, ಸೂಕ್ಷ್ಮವಾಗಿ ಬಿಡಿಸುತ್ತಾರೆ.

ಬಾ.ರಂ. ಸುರೇಶ್, ಶಿವಮೊಗ್ಗ
ಏನು ಕೆಟ್ಟದಾದರೂ ಶನಿದೇವರನ್ನೇ ದೂಷಿಸುತ್ತಾರಲ್ಲ, ಏಕೆ?
ಶನಿ ಎನ್ನುವುದು 'ಶಕ್ತಿಯೆಲ್ಲ ನಿಷ್ಫಲವಾಯ್ತು' ಎಂಬುದರ ಹ್ರಸ್ವರೂಪವಂತೆ.

ಪಿ. ಜಯವಂತ ಪೈ, ಕುಂದಾಪುರ
ನಾಮಪತ್ರಕ್ಕೂ, ಪ್ರೇಮಪತ್ರಕ್ಕೂ ವ್ಯತ್ಯಾಸವೇನು?
ನಾಮಪತ್ರ ಎಲ್ಲೋ ಅಲರ್ಟ್; ಪ್ರೇಮಪತ್ರ ರೆಡ್ ಅಲರ್ಟ್.

ಮೈಸೂರು ಕುಸುಮ, ಶ್ರವಣಬೆಳಗೊಳ
ಎಲ್ಲರ ಪ್ರಶ್ನೆಗೆ ಉತ್ತರಿಸುವ ನಿಮಗೆ ನಿಮ್ಮ ಸತಿಯ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವ ಧೈರ್ಯವಿದೆಯೆ?
ಧೈರ್ಯವೇನೋ ಇದೆ; ಜಾಣತನದ್ದೇ ಕೊರತೆ.

## ಬಹುಮಾನಿತ ಪ್ರಶ್ನೆ

ಗಂಜಾಂ ನಾಗರಾಜ್, ಮೈಸೂರು
ಭಗವಾನ್ ಶ್ರೀಕೃಷ್ಣ ಕೌರವರ ಪಕ್ಷದಲ್ಲಿ ಇದ್ದಿದ್ದರೆ ಏನಾಗುತ್ತಿತ್ತು?
ಅವನನ್ನೂ ವಿದುರನಂತೆ ಹೊರಹಾಕಿರುತ್ತಿದ್ದರು.

ಪಿ. ಗೋವಿಂದರಾಜ್, ಶಿವಮೊಗ್ಗ
ಹೆಣ್ಣು ಸಂಸಾರದ ಕಣ್ಣು. ಗಂಡು?
ಕಣ್ಣಳತೆಯಲ್ಲಿರುವ ಪ್ರಾಣಿ.

ಪಿ.ಜೆ. ರಾಘವೇಂದ್ರ, ಮೈಸೂರು
ರಾಜಕಾರಣದಲ್ಲಿ ರೆಬೆಲ್ ಸ್ಟಾರುಗಳ ಸಂಖ್ಯೆ ಹೆಚ್ಚಾಗಿದೆಯಲ್ಲ?
'ಚಕ್ರವ್ಯೂಹ'ಗಳು 'ಅಂತ'ವಾಗಬೇಕಾದರೆ ರೆಬೆಲ್ ಆಗಲೇಬೇಕಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಮದುವೆಯಲ್ಲಿ ಸಪ್ತಪದಿ ಹಾಕಿಸುವುದು ಏಕೆ?



ಪಂಚೇಂದ್ರಿಯಗಳು, ಮನಸ್ಸು, ಬುದ್ಧಿ; ಈ ಏಳೂ ಚಾಲನೆಯಲ್ಲಿರಲೆಂದು ಸೂಚಿಸಲು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ನಮ್ಮಂತೆಯೇ ಮೂಕಪ್ರಾಣಿಗಳಿಗೂ ಮಾತು ಬರುವಂತಿದ್ದರೆ ಹೇಗಿರುತ್ತಿತ್ತು?
'ನಿಮ್ಮತ್ತೇಗೂ ಚೈನ್ ಹಾಕಿ ಎಳೆದ್ರೆ ಹೇಗಿರತ್ತೆ ಗೊತ್ತಾ?' ಎಂದು ನಾಯಿಗಳಿಂದ ಉಗಿಸಿಕೊಳ್ಳಬೇಕಾಗುತ್ತಿತ್ತು.

ಹೆಚ್.ವಿ. ಶ್ರೀಧರ್, ಬೆಂಗಳೂರು
ಆರೋಗ್ಯ ಸ್ಥಿತಿ ಸರಿಯಿಲ್ಲ. ಡಿಆರ್‌ಎಸ್ ತೊಗೊಂಡಿದ್ದೀನಿ. ಥರ್ಡ್ ಅಂಪೈರ್ ಏನು ಹೇಳಬಹುದು?
'ಅಂಪರ್ಸ್ ಕಾಲ್' ಎನ್ನುತ್ತಾ ವೈದ್ಯನಿಗೇ ನಿರ್ಣಯ ಬಿಡಬಹುದು.

■ ರಾಮ್